ಸಾಕ್ಷಿಯನ್ನು ದಿಃ 29.04.2025 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿಯರ ಪರ ವಕೀಲರಿಂದಃ

1. ಮನೆ ಜಾಗಕ್ಕೆ ಕರಿಯಪ್ಪನವರು ನಿರ್ಮಲಾ ರವರ ಮೇಲೆ ತಮ್ಮ ಜಾಗ ಎಂದು ಹಾಕಿದ ಕೇಸ್ ಗೆ ಸಾಕ್ಷಿ ಹೇಳಲು ಬಂದಿರುತ್ತೇನೆ.

2. ಕರಿಯಪ್ಪನವರು ಯಾವ ಆಸ್ತಿಗೆ ಸಂಬಂಧಪಟ್ಟಂತೆ ದಾವೆ ಹಾಕಿದ್ದಾರೆ ಎಂದರೆ, 1 ಎಕರೆ 37 ಗುಂಟೆಗೆ ಹಾಕಿರುತ್ತಾರೆ.

3. ನೀವು ಹಾಗೂ ಚಂದ್ರಶೇಖರ ರವರು ಸ್ನೇಹಿತರು ಎಂದರೆ, ಒಂದೇ ಊರಿನವರು.

4. ಈ ದಾವೆಯಲ್ಲಿ ಸಾಕ್ಷಿ ಹೇಳುವಂತೆ ವಾದಿ ನಿಮ್ಮನ್ನು ಕರೆದುಕೊಂಡು ಬಂದಿರುತ್ತಾರೆ ಎಂದರೆ ಸರಿ.

5. ನನಗೆ ಓದಲು ಬರೆಯಲು ಬರುವುದಿಲ್ಲ.

6. ನನಗೆ ಮರೂರು ಗ್ರಾಮದ ಸ.ನಂ.61 ರಲ್ಲಿ 2 ಎಕರೆ 10 ಗುಂಟೆ ಜಮೀನು ಇದೆ.

7. ದೊಡ್ಡ ಹೊಸೂರು ಗ್ರಾಮದಲ್ಲಿ ನನಗೆ ಯಾವುದೇ ಜಮೀನು ಇಲ್ಲ.

8. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ನಾನೇ ಹೇಳಿ ಬರೆಸಿರುತ್ತೇನೆ.

9. ದಾವಾ ಜಮೀನಿನ ಬಗ್ಗೆ ನಾನು ಯಾವುದೇ ಪತ್ರ ನೋಡಿದ ಬಗ್ಗೆ ನೆನಪಿಲ್ಲ. ನಾನು ಯಾವುದೇ ಪತ್ರಕ್ಕೆ ಸಹಿ ಹಾಕಿಲ್ಲ.

10. ನನ್ನ ಮುಖ್ಯ ವಿಚಾರಣೆಯಲ್ಲಿ ಬರೆದಿರುವ ಚಕ್ಕುಬಂದಿಯನ್ನು ಯಾವ ದಾಖಲೆ ಆಧಾರದ ಮೇಲೆ ಬರೆಸಿದ್ದೀರಾ ಎಂದರೆ, ನನಗೆ ನನೆಪಿಲ್ಲ.

11. ದಾವಾ ಜಮೀನಿನ ಬಗ್ಗೆ ನಿಮಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಚಂದ್ರಶೇಖರ ರವರ ಮಾತು ಕೇಳಿ ನೀವು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

12. ಚಂದ್ರಶೇಖರವರು ನಿಮ್ಮ ಸ್ನೇಹಿತರಾದ ಕಾರಣ ಕರಿಯಪ್ಪನವರಿಗೆ ತೊಂದರೆಯಾಗಲಿ ಹಾಗೂ ವಾದಿಗೆ ಅನುಕೂಲವಾಗಲಿ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಒ

ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ
ಪಿರಿಯಾಪಟ್ಟಣ